# ಕನ್ನಡ ಭಾಷೆ ಸಾಹಿತ್ಯ ಸಾಂಸ್ಕೃತಿಕ ಸಂಬಂಧ ಹಾಗೂ ಸವಾಲುಗಳು ಒಂದು ಚಿಂತನೆ

**ಡಾ.ಕೆ ಎಸ್ ಶಿವಪ್ರಕಾಶ**
**ಕನ್ನಡ ಉಪನ್ಯಾಸಕರು**

ಸರಳವೂ, ಸುಂದರವೂಆದಕನ್ನಡ ಭಾಷೆಗೆಕ್ರಿ.ಶ. ೪೫೦ರ ಹಲ್ಮಿಡಿ ಶಾಸನವೇ ಆಧಾರ. ಸೂಕ್ಷ್ಮವಾಗಿ ಅವಲೋಕಿಸಿದರೆ ಹಲ್ಮಿಡಿ ಶಾಸನಕ್ಕಿಂತ ಪ್ರಾಚೀನವಾದ ಆಧಾರಗಳು ದೊರೆಯುತ್ತವೆ. ಉದಾ: ಕ್ರಿ.ಪೂ.ದಗ್ರೀಕ್ ಪ್ರಹಸನಗಳಲ್ಲಿ, ಕ್ರಿ.ಪೂ. 2ರ ಅಶೋಕನ ಶಾಸನದಲ್ಲಿ (ಇಸಿಲ) ಕನ್ನಡದ ಪದಗಳು ದೊರಕಿವೆ.

ಏಳನೆಯ ಶತಮಾನದಲ್ಲಿಕನ್ನಡ ಭಾಷೆಗೆ ನಿಖರವಾದ, ಖಚಿತವಾದ, ಆಧಾರವಾಗಿ 'ಬಾದಾಮಿ ಶಾಸನ' ದೊರಕುತ್ತದೆ.ಈ ಶಾಸನದಲ್ಲಿಕಂಡುಬರುವಕನ್ನಡಿಗರ ವರ್ಣನೆಅತ್ಯಂತ ಸೊಗಸಾಗಿದೆ. ಕನ್ನಡ ಭಾಷೆಗೆ ಸರಿಸುಮಾರುಎರಡು ಸಾವಿರ ವರ್ಷಗಳ ಇತಿಹಾಸವಿದೆ.ಸಮೃದ್ಧ, ಸಂಪದ್ಭರಿತ ಭಾಷೆಕನ್ನಡ, ಜಾಗತೀಕರಣದಲ್ಲಿಕನ್ನಡ ಭಾಷೆಗೆಆಪತ್ತುಎದುರಾಗಿದೆ.ಕನ್ನಡ ಮಾತ್ರವಲ್ಲಜಗತ್ತಿನ ಅನೇಕ ಭಾಷೆಗಳ ಮೇಲೆ ಇಂಗ್ಲೀಷ್ ಭಾಷೆಆಕ್ರಮಣ ಮಾಡುತ್ತಿದೆ.ಇಂತಹ ಸಂದರ್ಭದಲ್ಲಿಕನ್ನಡವನ್ನು ಉಳಿಸುವ ಹಾಗೂ ಬೆಳೆಸುವ ಗುರುತರವಾದಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಸಾಧುಂಗೆ ಸಾದುಂ, ಮಾಧುರ್ಯಂಗೆ ಮಾಧುರ್ಯಂ

ಭಾದಿಪ್ಪ ಕಲಿಗೆ ಕಲಿಯುಗ ವಿಪರೀತನ್

ಮಾದವನೀತನ್ ಪೆಱನಲ್ಲ॥

ಇನ್ನೂ ಸಾಹಿತ್ಯಿಕವಾಗಿ೮೨೦ರಲ್ಲಿ ದೊರಕುವ ಶ್ರೀ ವಿಜಯನ 'ಕವಿರಾಜ ಮಾರ್ಗ' ಕೃತಿ ಕೇವಲ ಒಂದು ಲಾಕ್ಷಣಿಕಗ್ರಂಥಕ್ಕೆ ಸೀಮಿತವಾಗದೆ, ಕರ್ನಾಟಕದ ಭೌಗೋಳಿಕ ಪರಿಸರ, ಕನ್ನಡಜನರ ಸಂಸ್ಕೃತಿ, ನಡೆನುಡಿ, ಆಚಾರ-ವಿಚಾರ ಹೀಗೆ ಇನ್ನೂ ಅನೇಕ ಗುಣ-ವಿಶೇಷತೆಗಳನ್ನು ಎತ್ತಿಹಿಡಿಯುತ್ತಿದೆ.ಉದಾ:

ಕಾವೇರಿಯಿಂದಮಾ ಗೋ

ದಾವರಿವರಮಿರ್ದ ನಾಡದಾ ಕನ್ನಡದೊಳ್

ಭಾವಿಸಿದ ಜನಪದಂ ವಸು

ಧಾವಳಯ ವಿಲೀನ ವಿಶದ ವಿಷಯ ವಿಶೇಷಂ

'ಪದನರಿದು ನುಡಿಯಲುಂ ನುಡಿ

ದುದನರಿದಾರಯಲು ಮಾರ್ಪರಾ ನಾಡವರ್ಗಳ್

ಚತುರರ್ ನಿಜದಿಂಕುರಿತೋ

ದದೆಯುಂಕಾವ್ಯಪ್ರಯೋಗ ಪರಿಣಿತ ಮತಿಗಳ್॥

ಕುರಿತುಓದದೆಯೂಕಾವ್ಯರಚನೆ ಮಾಡುತ್ತಿದ್ದರುಎನ್ನುವಲ್ಲಿಕವಿರಾಜಮಾರ್ಗಕಾರನಿಗಿಂತಲೂ

ಹಿಂದೆಯೇಕನ್ನಡದಲ್ಲಿ ಸಾಹಿತ್ಯರಚನೆಯಾಗಿತ್ತುಎನ್ನುವುದನ್ನು ಗಮನಿಸಬಹುದು.

ಹತ್ತನೆಯ ಶತಮಾನದಲ್ಲಿ ಪಂಪ ಮಹಾಕವಿಯಆಗಮನದಿಂದಕನ್ನಡ ಸಾಹಿತ್ಯ ಸಮೃದ್ಧತೆಯನ್ನುಕಂಡುಕೊಂಡಿತು. ಕನ್ನಡದ ಆದಿಕವಿ, ಅಗ್ರಕವಿ, ನಾಡೋಜಎಂದು ಕರೆಸಿಕೊಂಡ ಪಂಪ ಎರಡು ಮಹಾಕಾವ್ಯಗಳನ್ನು ರಚಿಸಿದ.ಅದರಲ್ಲಿಒಂದು ಲೌಕಿಕ ಕಾವ್ಯ 'ವಿಕ್ರಮಾರ್ಜುನವಿಜಯ' ವಾದರೆ ಮತ್ತೊಂದು ಅಲೌಕಿಕ ಕಾವ್ಯವಾದ 'ಆದಿಪುರಾಣ' ಪಂಪ ಕನ್ನಡದ ಬಗೆಗೆ ತನಗಿರುವಅಭಿಮಾನವನ್ನುತನ್ನ ವಿಕ್ರಮಾರ್ಜುನವಿಜಯದಲ್ಲಿ ಹೀಗೆ ಹೇಳುತ್ತಾನೆ, 'ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ'.ನಂತರ ಬಂದರನ್ನತನ್ನ 'ಗದಾಯುದ್ಧ' ಮಹಾಕಾವ್ಯದ ಮೂಲಕ ಕನ್ನಡ ಭಾಷೆಯ ಶಕ್ತಿ ಹಾಗೂ ಸತ್ವವನ್ನು ವಿಸ್ತರಿಸಿದ.ಅದನ್ನುಆತನ ಈ ಪದ್ಯವೇ ಹೇಳುತ್ತದೆ.

ಆ ರವಮಂ ನಿರ್ಜಿತಕಂ

ಠಿರವರವಮಂ ನಿರಸ್ತಘನರವಮಂ ಕೋ

ಪಾರುಣ ನೇತ್ರಂ ಕೇಳ್ದಾ

ನೀರೊಳಗಿರ್ದುಂ ಬೆಮರ್ತನುರಗಪತಾಕಂ.

ಮುಂದೆ ಹನ್ನೆರಡನೆಯ ಶತಮಾನದಲ್ಲಿ ಪ್ರಾರಂಭವಾದ ವಚನ ಚಳುವಳಿ ಕರ್ನಾಟಕದಲ್ಲಿ ಭಾಷೆ, ಸಾಹಿತ್ಯ, ಸಂಸ್ಕೃತಿ, ಧರ್ಮ ಹಾಗೂ ಸಮಾಜವನ್ನು

ಕುರಿತಂತೆ ಹೊಸ ಇತಿಹಾಸವನ್ನು ಬರೆಯಿತು.ಈ ವೇಳೆ ಸಂಸ್ಕೃತ ಬಲಾಢ್ಯ –ವಾಗಿದ್ದರೂ, ಹಳಗನ್ನಡ ಭಾಷೆಚಲಾವಣೆಯಲ್ಲಿದ್ದರೂ, ಅವೆರಡನ್ನು ಮೀರಿಒಂದೇ ಬಾರಿಗೆಜನಸಾಮಾನ್ಯರ ಭಾಷೆಯಲ್ಲಿ ವಚನಗಳನ್ನು ರಚಿಸಿ ಜನರನ್ನುತಲುಪುವ ಹಾಗೆ ಮಾಡಿದರು.ಮಹಾ ಮಾನವತವಾದಿ ಬಸವಣ್ಣನಿಂದಆರಂಭವಾದ ವಚನ ಚಳುವಳಿ ಅನುಭವ ಮಂಟಪದ ಮೂಲಕ ಕರ್ನಾಟಕ –ದಲ್ಲಿಧಾರ್ಮಿಕ, ಸಾಮಾಜಿಕಆಂದೋಲನ ನಡೆಸಿತು.ಧಾರ್ಮಿಕ ಹಾಗೂ ಸಾಮಾಜಿಕಕ್ರಾಂತಿಜೊತೆಗೆಇದೊಂದು ಸಾಂಸ್ಕೃತಿಕಕ್ರಾಂತಿಯೂ ಹೌದು.

ಏನು ಬಂದಿರಿ ಹದುಳವಿದ್ದಿರಿ ಎಂದಡೆ

ನಿಮ್ಮೈಸಿರಿ ಹಾರಿಹೋಹುದೆ?

ಕುಳ್ಳಿರೆಂದಡೆ, ನೆಲ ಕುಳಿ ಹೋಹುದೆ?

ಒಡನೆ ನುಡಿದಡೆ ಸಿರಹೊಟ್ಟೆಯೊಡೆವುದೇ?

ಕೊಡಲಿಲ್ಲದಿದ್ದಡೊಂದುಗುಣವಿಲ್ಲದಿದ್ದಡೆ

ಮೂಗಕೊಯ್ವುದ ಮಾಬನೆ ಕೂಡಲಸಂಗಮದೇವದೇವಾ.

ಇವನಾರವಇವನಾರವಎಂದೆನಸದಿರಯ್ಯಾ

ಇವ ನಮ್ಮವ ಇವ ನಮ್ಮವ ಎಂದೆಣಿಸಿರಯ್ಯಾ

ಕೂಡಲಸಂಗಮದೇವ ನಿಮ್ಮ ಮನೆಯ

ಮಗನೆಂದೆನಿಸಿರಯ್ಯಾ.

ಇದು ನಮ್ಮ ಸಂಸ್ಕೃತಿ.ಸಾವಿರಾರು ವರ್ಷಗಳಿಂದ ಇಲ್ಲಿರುವವರನ್ನು, ಹೊರಗಡೆಯಿಂದ ಬಂದವರನ್ನು ಗೌರವಾದರಗಳಿಂದ ಸತ್ಕರಿಸಿದ್ದೇವೆ. ಮುಂದೆಯೂ ಸತ್ಕರಿಸಲಿದ್ದೇವೆ. ಇಂತಹ ಪ್ರೀತಿ, ಗೌರವಾದರಗಳನ್ನು ಸ್ವೀಕರಿಸಿದ ಜನಕನ್ನಡ ಭಾಷೆ ಹಾಗೂ ಭಾಷೆಯಜನಾಂಗದ ಬಗ್ಗೆ ಯಾವರೀತಿಯಕೃತಜ್ಞತೆಯನ್ನುಇಟ್ಟುಕೊಂಡಿದ್ದಾರೆ?ಅವರೇಆತ್ಮಾವಲೋಕನ ಮಾಡಿಕೊಳ್ಳಲಿ.ಮುಂದೆ ಬಂದ ‘ದಾಸ ಸಾಹಿತ್ಯ’ವೂ ವಚನ ಸಾಹಿತ್ಯದ ಹಾದಿಯನ್ನೇ ತುಳಿದು, ವಚನಕಾರರು ಮಾಡಿದ ಹೋರಾಟವನ್ನೇ ಮುಂದುವರೆಸಿಕೊಂಡು ಬಂತು.

ಪಂಪನಿಂದ ಪ್ರಾರಂಭವಾದ ಸಾಹಿತ್ಯ೨೦ನೆಯ ಶತಮಾನದಲ್ಲಿ ಮೈದುಂಬಿದಕಡಲಿನಂತೆತನ್ನ ಅನೇಕ ತೆರೆಗಳನ್ನು ಹೊರ ಹಾಕಿತು.ವೈಚಾರಿಕತೆ, ನಿಸರ್ಗಪ್ರೀತಿ, ಭಾವನೆಗಳ ತೀವ್ರತೆ, ಹೊಸದನ್ನು ಹೇಳಬೇಕೆಂಬ ಹಂಬಲ, ಸ್ವಾತಂತ್ರ್ಯತೆ, ಅಸ್ಪೃಶ್ಯತೆ, ಹಸಿವಿನ ಭೀಕರತೆ, ಬಡತನ, ನಿರುದ್ಯೋಗ ಹೀಗೆ ಒಂದೇಎರಡೇ ಲೆಕ್ಕವಿಲ್ಲದಷ್ಟು ಸಂಗತಿಗಳು ನಮ್ಮ ಸಾಹಿತ್ಯದ ವಸ್ತುಗಳಾದವು.

೧೯೫೬ರಲ್ಲಿ ಮೈಸೂರುರಾಜ್ಯ ನಿರ್ಮಾಣವಾಯಿತು. ಈ ವೇಳೆ ಅನೇಕ ಕನ್ನಡವನ್ನಾಡುವ ಪ್ರದೇಶಗಳು ಅಂದರೆಜಿತ್, ಅಕ್ಕಲಕೋಟೆ, ಸೊಲ್ಲಾಪುರ, ಆಲೂರು, ಅದವಾನಿ, ಗೊಳ್ಯಂ, ಮಡಕಸಿರಾ, ಹೊಸೂರು, ತಾಳವಾಡಿ, ನೀಲಗಿರಿ, ಮುಂತಾದವು ನಮ್ಮ ಸೀಮಾರೇಖೆಯಿಂದ ಹೊರಗಡೆಯೇ ಉಳಿದವು. ಈ ವೇಳೆ ಕನ್ನಡದ ಹೋರಾಟ ಮತ್ತೆ ಶುರುವಾಯಿತು.ಇದೇ ವೇಳೆ ಕನ್ನಡದ ಕವಿಗಳು ಭಾಷಾಭಿಮಾನ ಹಾಗೂ ನಾಡಿನಅಭಿಮಾನ ಹುಟ್ಟಿಸುವ ಸಾಹಿತ್ಯ ರಚಿಸಿದರು.'ಕನ್ನಡಕ್ಕೆ ಕೈ ಎತ್ತು, ನಿನ್ನ ಕೈ ಕಲ್ಪವೃಕ್ಷವಾಗುವುದು' ಎಂದರು ಕುವೆಂಪು. ಹಾಗೆಯೇ ಜಿ.ಪಿ.ರಾಜರತ್ನಂಅವರು

ಹೆಂಡ ಹೋಗ್ಲಿ, ಹೆಂಡ್ತಿ ಹೋಗ್ಲಿ

ನಾನೂ ಕೊಚ್ಕೊಂಡು ಹೋಗ್ಲಿ

ಪರ್ಪಂಚಿರೋತನಕಕನ್ನಡ ಪದಗೋಳ್ ನುಗ್ಲಿ'

ನರಕಕ್ಕೆ ಇಳ್ಸಿ ನಾಲ್ಗೆ ಸೀಳ್ಸಿ ಬಾಯ್

ಒಲಿಸಾಕಿದ್ರೂನೆ, ಮೂಗ್ನಲ್ಕನ್ನಡ್

ಪದವಾಡ್ತೀನಿ ನನ್ನ ಮನಸ್ಸನ್ ನೀ ಕಾಣೆ

ಎನ್ನುತ್ತಾರೆ.ಹೀಗೆ ಸಾಹಿತ್ಯದ ಹೋರಾಟ ಹಾಗೂ ಸಾಮಾಜಿಕ ಹೋರಾಟದ ಪರಿಣಾಮವಾಗಿ೧೯೭೩ರ ನವೆಂಬರ್೧ ರಂದುಕರ್ನಾಟಕದಏಕೀಕರಣವಾಯಿತು.

ಕರ್ನಾಟಕಏಕೀಕರಣವಾಗಿ ನಾಲ್ಕು ದಶಕಗಳ ನಂತರವೂಕನ್ನಡ ಭಾಷೆಗಿರುವಆತಂಕ, ತಲ್ಲಣಗಳು ಹೆಚ್ಚಾಗುತ್ತಿವೆಯೇ ಹೊರತುಕಡಿಮೆಯಾಗಿಲ್ಲ. ಕಾರಣಇಂಗ್ಲೀಷ್ ಭಾಷೆ.ಇಂಗ್ಲೀಷ್ ಭಾಷೆಕಲಿತರೆ ಹಣ, ಐಶ್ವರ್ಯ,

ಸಂಪತ್ತು ಸಿಗುತ್ತದೆ ಎಂಬ ಭ್ರಮೆ ನಮ್ಮಜನರಲ್ಲಿರುವುದು.ಹಾಗೆಯೇಇಂಗ್ಲೀಷ್‌ನಷ್ಟು ವೇಗವಾಗಿ ಕನ್ನಡದ ಭಾಷಾ ಸಂಪತ್ತನ್ನು ಬೆಳೆಸಲಾಗುತ್ತಿಲ್ಲ. ಬೆಳೆಸಿದರು ಬಳಸಲಾಗುತ್ತಿಲ್ಲ.

ಕನ್ನಡ ಭಾಷೆ ಬಲಿಷ್ಠವಾಗಬೇಕಾದರೆ ಮೊದಲುಕರ್ನಾಟಕರಾಜಕೀಯವಾಗಿ ಬಲವಾಗಬೇಕು.ಆದರೆಕರ್ನಾಟಕದರಾಜಕೀಯ ಭಾಷೆಯ ವಿಚಾರದಲ್ಲಿಗಟ್ಟಿ ನಿರ್ಧಾರವನ್ನು (ಕನ್ನಡದ ಪರವಾಗಿ) ತೆಗೆದುಕೊಳ್ಳುವಂತಹ ಸರ್ಕಾರಗಳು ಬಂದದ್ದುತೀರಾಕಡಿಮೆ.ಕಳೆದ ಸರ್ಕಾರಕನ್ನಡದ ಶಾಲೆಗಳನ್ನು ಮುಚ್ಚಲು ಹೊರಟಿದ್ದುಕಣ್ಣೆದುರಿಗಿದೆ.ಸದ್ಯದಲ್ಲಿ ಸಂತೋಷದ ಸಂಗತಿಎಂದರೆ ಮಾನ್ಯ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರು ಕನ್ನಡ ಶಾಲೆಗಳನ್ನು ಮುಚ್ಚುವುದಿಲ್ಲ ಹಾಗೂ ಸರ್ಕಾರದಎಲ್ಲಾ ಪತ್ರ ವ್ಯವಹಾರಗಳು ಕನ್ನಡದಲ್ಲಿರಬೇಕುಎಂದುಆದೇಶ ಹೊರಡಿಸಿರುವುದು. ಹಾಗೆಯೇ ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿರಬೇಕುಎನ್ನುವಅವರ ಹೋರಾಟ ಶ್ಲಾಘನೀಯವಾದುದು.

ಕನ್ನಡಿಗರೇ, ಕನ್ನಡ ಬರೀಒಂದು ಭಾಷೆಎಂದು ಭಾವಿಸಬೇಡಿ, ಅದು ಬದುಕು. ಕುವೆಂಪು "ಅಖಂಡಕರ್ನಾಟಕ" ಕವಿತೆಯಲ್ಲಿ ಹೇಳುವ ಹಾಗೆ ಅದೊಂದು,

'ಮಂತ್ರಕಣಾ। ಶಕ್ತಿ ಕಣಾ।

ತಾಯಿಕಣಾ। ದೇವಿ ಕಣಾ।

ಬೆಂಕಿ ಕಣಾ। ಸಿಡಿಲು ಕಣಾ।

.................. ಚಂಡಿಕಣಾ।'

ಕನ್ನಡಿಗರು ಭಾಷಾಭಿಮಾನಿಗಳಾಗಬೇಕಿದೆ.ಇಲ್ಲದೇ ಹೋದರೆಕನ್ನಡ ಭಾಷೆ ಉಳಿವಿಕೆ ಕಷ್ಟ.ಅಂತಿಮವಾಗಿ ಭಾಷಾ ದುರಾಭಿಮಾನಿಗಳಿಗೆ ಶ್ರೀರಂಗರ ಮಾತುಅರ್ಥವಾಗಬೇಕು.

ಪರಭಾಷಾ ವ್ಯಾಮೋಹದಿ ತಾಯ್ನುಡಿಯ ಕಡೆಗಣಿಸಿ ಅನ್ಯಭಾಷಾ ವ್ಯಾಮೋಹಿಗಳಾದ ತಾಯ್ಗಂಡರಿಗೆ ಥಳಿಸಿ ಬುದ್ಧಿ ಹೇಳಬೇಕಯ್ಯ ಎನ್ನುತ್ತಾರೆ.